# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 314/2015

ಸಿಡಬ್ಲೂ-2 ಪಿಡಬ್ಲೂ-1

ಹೆಸರುಃ ಚನ್ನಬಸಪ್ಪ ಪಂಚಮಿ

ತಂದೆ ಹೆಸರುಃ ದೇವಪ್ಪ

ವಯಸ್ಸುಃ 34 ವರ್ಷ

ಉದ್ಯೋಗಃ ಒಕ್ಕಲುತನ

ವಾಸ ಸ್ಥಳಃ ಬಿಲಕಲ

ದಿನಾಂಕ 15-02-2019

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಾಸಾ-3 ರವರ ಪರಿಚಯವಿದೆ. ಈಗ ನೋಡುತ್ತಿರುವ ದಾಖಲೆ ಮೇಲಿನ ಸಹಿ ನನ್ನದು, ಅದು ಗುನ್ನೆ ಸ್ಥಳದ ಪಂಚನಾಮೆಯಾಗಿದ್ದು, ಪಂಚನಾಮೆಯನ್ನು ನಿಪಿ-1, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಪೋಟೋದಲ್ಲಿರುವ ವ್ಯಕ್ತಿ ನಾನು ಇರುತ್ತೇನೆ. ಸನ್ 2013 ರಲ್ಲಿ ಪೋಲಿಸರು ನಮ್ಮೂರಿಗೆ ಬಂದಿದ್ದು, ಶಾಲೆ ಕಟ್ಟಡದ ಮುಂದೆ ನಿಂತು ಪೋಟೋ ತೆಗೆಸಿಕೊಳ್ಳಲು ವಿನಂತಿಸಿಕೊಂಡ ಮೇರೆಗೆ ಪೋಟೋ ತೆಗೆದಿರುತ್ತಾರೆ. ಸದರಿ ಪೋಟೋವನ್ನು ನಿಪಿ-2 ಎಂದು ಗುರುತಿಸಲಾಯಿತು. ಸದರಿ ನಿಪಿ-2 ನ್ನು ಗುನ್ನೆ ಸ್ಥಳ ಪಂಚನಾಮೆ ಮಾಡುವ ಸಲುವಾಗಿ ತೆಗೆದಿರುತ್ತಾರೆ. ದಿಃ 30.01.2013 ರಂದು ಮುಂಜಾನೆ 11.30 ರಿಂದ 12.30 ರ ವರೆಗೆ ನಿಪಿ-1 ರಂತೆ ಗುನ್ನೆ ಸ್ಥಳದ ಪಂಚನಾಮೆ ಜರುಗಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಶಾಲೆ ಕಟ್ಟಡ ಮುಗಿದಿಲ್ಲ ಎಂದು ಕೇಸು ದಾಖಲಾಗಿದ್ದು, ಕಾರಣ ಪಂಚನಾಮೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಆರ್. ಎಮ್. 2 ನೇ ಆರೋಪಿ ಪರ ವಕೀಲರಿಂದ**

ನಿಪಿ-1 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ಪೋಲಿಸರ ನಿರ್ದೇಶನದ ಮೇರೆಗೆ ನಿಪಿ-1 ಕ್ಕೆ ಸಹಿ ಹಾಕಿರುತ್ತೇನೆ. ನಿಪಿ-1 ನ್ನು ಜರುಗಿಸುವ ಸಮಯದಲ್ಲಿ ನಾನು ಮತ್ತು ಚಾಸಾ-3 ರವರು ಇದ್ದು, ನಮ್ಮನ್ನು ಬಿಟ್ಟು ಯಾರು ಇರಲಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಸದರಿ ದಿನ ಪೋಲಿಸರು ನನ್ನನ್ನು ಗುನ್ನೆ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ, ನಿಪಿ-1 ರಂತೆ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಪಾಟೀ ಸವಾಲುಃ ಶ್ರೀ ಆರ್. ಬಿ 1 ನೇ ಆರೋಪಿ ಪರ ವಕೀಲರು 2 ನೇ ಆರೋಪಿ ಪರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿಕೊಂಡ ಮೇರೆಗೆ ಅವರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.)**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.

## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 314/2015

ಸಿಡಬ್ಲ್ಯೂ-3 ಪಿಡಬ್ಲ್ಯೂ-2

| | |
|---|---|
| ಹೆಸರುಃ | ಯಲ್ಲಪ್ಪ ಅಮ್ಮನೋರ |
| ತಂದೆ ಹೆಸರುಃ | ಮಲ್ಲೇಶಪ್ಪ |
| ವಯಸ್ಸುಃ | 55 ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸ ಸ್ಥಳಃ | ಬಿಲಕಲ |

ದಿನಾಂಕ 15-02-2019

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಾಸಾ-2 ರವರ ಪರಿಚಯವಿದೆ. ಈಗ ನೋಡುತ್ತಿರುವ ದಾಖಲೆ ಮೇಲಿನ ಸಹಿ ನನ್ನದು, ಅದು ಗುನ್ನೆ ಸ್ಥಳದ ಪಂಚನಾಮೆಯಾಗಿದ್ದು, ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಪೋಟೋದಲ್ಲಿರುವ ವ್ಯಕ್ತಿ ನಾನು ಇರುತ್ತೇನೆ. ಸನ್ 2013 ರಲ್ಲಿ ಪೋಲಿಸರು ನಮ್ಮೂರಿಗೆ ಬಂದಿದ್ದು, ಶಾಲೆ ಕಟ್ಟಡದ ಮುಂದೆ ನಿಂತು ಪೋಟೋ ತೆಗೆಸಿಕೊಳ್ಳಲು ವಿನಂತಿಸಿಕೊಂಡ ಮೇರೆಗೆ ಪೋಟೋ ತೆಗೆದಿರುತ್ತಾರೆ. ಸದರಿ ನಿಪಿ-2 ನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ನಿಪಿ-1 ನ್ನು ಯಾವ ಕಾರಣಕ್ಕಾಗಿ ಬರೆದಿರುತ್ತಾರೆ ನನಗೆ ಗೊತ್ತಿಲ್ಲ. ಪೋಲಿಸರ ವಿನಂತಿಯ ಮೇರೆಗೆ ನಿಪಿ-1 ಕ್ಕೆ ಸಹಿ ಹಾಕಿದ್ದು, ಅದರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 30.01.2013 ರಂದು ಸೇಡಂ ಪೋಲಿಸರು ನನ್ನನ್ನು ಹಾಗೂ ಚಾ.ಸಾ-2 ರವರನ್ನು ನಮ್ಮೂರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಟ್ಟಡದ ಗುನ್ನೆ ಸ್ಥಳಕ್ಕೆ ಪಂಚನಾಮೆಗೆಂದು ಕರೆದುಕೊಂಡು ಹೋಗಿ ಬೆಳಿಗ್ಗೆ 11.30 ರಿಂದ 12.30 ರ ವರೆಗೆ ನಮ್ಮ ಸಮಕ್ಷಮ ನಿಪಿ-1 ರಂತೆ ಗುನ್ನೆ ಸ್ಥಳದ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ನ್ನು ಜರುಗಿಸುವ ಸಮಯದಲ್ಲಿ ನಿಪಿ-2 ನ್ನು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ-1 ರಂತೆ ಪಂಚನಾಮೆ ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.